ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ಸೂಚನೆಗೆ ಈ ಕೆಳಕಂಡ ಲಿಖಿತ ಹೇಳಿಕೆ ನೀಡಲು ತಮ್ಮ ಅನುಮತಿ ಕೋರುತ್ತೇನೆ.

ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ಬೆಂಗಳೂರು ನಗರ, ಗಾಂಧೀನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆನಂದರಾವ್ ವೃತ್ತದ ಬಳಿ ಸುಬೇದಾರ್ ಛತ್ರಂ ರಸ್ತೆಗೆ ಹೊಂದಿಕೊಂಡಂತೆ ಒಂದು ಪೋಲೀಸ್ ಕಾಲೋನಿ ಇದೆ. ಇದನ್ನು 1975ನೇ ಇಸವಿಯಲ್ಲಿ ಅಂದರೆ, ಸುಮಾರು 17 ವರ್ಷಗಳ ಹಿಂದೆ ನಿರ್ಮಿಸಿರುತ್ತಾರೆ. ಇಲ್ಲಿ 252 ಪೋಲೀಸ್ ಕಾನ್ಸ್‌ಟೇಬಲ್‌ಗಳ ಹಾಗೂ 3 ವರ್ಷಗಳ ಹಿಂದೆ ಕಟ್ಟಿದ 12 ಸಬ್ ಇನ್ಸ್‌ಪೆಕ್ಟರ್‌ಗಳ ವಸತಿ ಗೃಹಗಳು ಇವೆ. ಇಲ್ಲಿ 2 ಕಿ.ಮೀ. ಉದ್ದ ಇರುವ ರಸ್ತೆಗಳನ್ನು ಸುಮಾರು 15 ವರ್ಷಗಳ ಹಿಂದೆ ನಿರ್ಮಿಸಿದ್ದು, ಇದಕ್ಕೆ ಡಾಂಬರನ್ನೂ ಸಹ ಹಾಕಿರುತ್ತಾರೆ. ಈ ರಸ್ತೆಗಳ ದುರಸ್ತಿ ಮಾಡದೇ ಇರುವುದರಿಂದ ಅಲ್ಲಲ್ಲಿ ಗುಂಡಿಗಳು ಬಿದ್ದು ಜನರ ಹಾಗೂ ವಾಹನ ಸಂಚಾರಕ್ಕೆ ತೊಂದರೆ ಕಂಡು ಬಂದಿದೆ. ಹಾಗೆಯೇ ಬೀದಿ ದೀಪಗಳ ದುರಸ್ತಿ ಮಾಡಬೇಕಾಗಿದೆ. ಇದನ್ನು ಗಮನಿಸಿ, ಸದರೀ ಕಾಲೋನಿಯ ರಸ್ತೆ ಹಾಗೂ ದೀಪಗಳ ದುರಸ್ತಿಗೆ ರೂ. 2.10.000 ಗಳ ಅಂದಾಜನ್ನು ತಯಾರಿಸಲಾಗಿದೆ. ಸಾಕಷ್ಟು ಅನುದಾನ ಈ ಸಾಲಿನಲ್ಲಿ ಲಭ್ಯವಿಲ್ಲದೇ ಇರುವುದರಿಂದ ಈ ಸಾಲಿನಲ್ಲಿ ದುರಸ್ತಿ ಕಾರ್ಯವನ್ನು ತೆಗೆದುಕೊಳ್ಳಲಾಗಲಿಲ್ಲ. ಸದರೀ ಕೆಲಸವನ್ನು ಅನುದಾನದ ಲಭ್ಯತೆ ಮೇಲೆ ಮುಂದಿನ ಸಾಲಿನಲ್ಲಿ (1992-93) ತೆಗೆದುಕೊಳ್ಳಲಾಗುವುದು.

3. ಮಂಗಳೂರು ತಾಲ್ಲೂಕು ಉಳ್ಳಾಲವನ್ನು ಪುರಸಭೆಯನ್ನಾಗಿ ಪರಿವರ್ತಿಸುವ ಬಗ್ಗೆ.

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ, ಮಂಗಳೂರು ತಾಲೂಕಿನ ಉಳ್ಳಾಲ ಮಂಡಲ್ ಪಂಚಾಯಿತಿಯು 34 ಸಾವಿರಕ್ಕೂ ಮಿಕ್ಕಿದ ಜನಸಂಖ್ಯೆಯ ಊರು. ಈ ಗ್ರಾಮದ ಅಭಿವೃದ್ಧಿ. ಬೆಳವಣಿಗೆಯ ದೃಷ್ಟಿಯಿಂದ ಉಳ್ಳಾಲದಲ್ಲಿ ಮಂಡಲ ಪಂಚಾಯತ್ ರದ್ದುಪಡಿಸಿ, ಪುರಸಭೆಯನ್ನಾಗಿ ಪರಿವರ್ತನೆ ಮಾಡುವುದು ತುಂಬಾ ಹಿತಕರವಾಗಿದೆ.

ಆದಕಾರಣ 34 ಸಾವಿರದಷ್ಟು ಜನಸಂಖ್ಯೆ ಇರುವ ಉಳ್ಳಾಲವನ್ನು ಪುರಸಭೆಯಾಗಿ ಮಾರ್ಪಡಿಸಬೇಕಾದುದು ಅತೀ ಅವಶ್ಯಕವಾಗಿರುತ್ತದೆ. ಈ ಕುರಿತು ಗ್ರಾಮಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಇದಿನಬ್ಬ ಅವರ ಸೂಚನೆಯನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಗಮನಕ್ಕೆ ತಂದು ಉತ್ತರ ತರಿಸಿಕೊಡುತ್ತೇನೆ.

4. ಹನುಮನಳ್ಳಿ ವಿತ ನೀರಾವರಿ

ಶ್ರೀ ಕೆ.ಎಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ ಹಾಸನ ಕ್ಷೇತ್ರದ ಕಟ್ಟಾಯ ಮತ್ತು ಶಾಂತಿಗ್ರಾಮದ ಹೋಬಳಿಗಳು ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತಿದ್ದು ಬರಗಾಲದ ಬವಣೆಯಿಂದ ಸಾರ್ವಜನಿಕರನ್ನು ರಕ್ಷಿಸಲು ಸರ್ಕಾರ ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳನ್ನು ವಿನಿಯೋಗಮಾಡುತ್ತಿದೆ. ಹಾಸನ ಕ್ಷೇತ್ರದಲ್ಲಿ ಹೇಮಾವತಿ ಡ್ಯಾಮ್‌ನ್ನು ಕಟ್ಟಿದ್ದು ಸಾವಿರಾರು ಎಕರೆಗಳು ಮುಳುಗಡೆಯಾಗಿದ್ದರೂ ಈ ತಾಲ್ಲೂಕಿಗೆ ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತಿರುವ ವಿಚಾರವನ್ನು ಈಗ್ಗೆ ಸುಮಾರು 8 ತಿಂಗಳ ಹಿಂದೆ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ವಿಧಾನ ಸೌಧದ ಮೂರನೆಯ ಮಹಡಿ ಕಾನ್‌ಫರೆನ್ಸ್ ಹಾಲಿನಲ್ಲಿ ನಡೆದ ಶಾಸಕರ ಮತ್ತು ಇಂಜಿನೀಯರ್‌ಗಳ ಮೀಟಿಂಗ್‌ನಲ್ಲಿ ತಂದಾಗ ಹನುಮನಹಳ್ಳಿ